PRESENTATION OF REPORT

Sixteenth Report of the Committee on Public undertakings

SRI H. T. KRISHNAPPA —Sir, I beg to present the Sixteenth Report of the Committee on Public Undertakings on 'Action taken' by the Government, on the observations contained in the Second Report of Committee on Public Undertakings (Fifth Assembly) on Karnataka Agro-Industries Corporation Limited.

MR. SPEAKER —Reports presented.

PRESENTATION OF PETITIONS

ಶ್ರೀಮತಿ ಅನುಸೂಯ ಗಜಾನನ ಶರ್ಮ. —ಮಾನ್ಯ ಅಧ್ಯಕ್ಷರೇ, ಉತ್ತರ ಕನ್ನಡ ಜಿಲ್ಲೆಯಲ್ಲಿ ಯಲ್ಲಾಪುರ ತಾಲ್ಲೂಕು, ಬರವಳ್ಳಿ, ಕೊಡಸಳ್ಳಿ ಮತ್ತು ಕಟ್ಟಿ ಗ್ರಾಮಗಳ ಗ್ರಾಮಸ್ಥರು ಪಾತೊಡ್ಡಿ ರಸ್ತೆಯನ್ನು ಸರ್ವಋತು ರಸ್ತೆಯಂನ್ನಾಗಿ ಪರಿವರ್ತಿಸಲು ಕೊಟ್ಟಂತಹ ಮನವಿಯನ್ನು ನಾನು ಈ ಸಭೆಯ ಮುಂದೆ ಒಪ್ಪಿಸುತ್ತಿದ್ದೇನೆ.

ಅದೇರೀತಿ ಉತ್ತರ ಕನ್ನಡ ಜಿಲ್ಲೆಯ ಸಿರಸಿ ತಾಲ್ಲೂಕು ಮಂಡಗನಮನೆ ಮಹಾ ಗಣಪತಿ ದೇವಸ್ಥಾನದ ಅಧ್ಯಕ್ಷರು ಮತ್ತು ಮತಿಗಟ್ಟ ಗ್ರಾಮಸ್ಥರು ಮತಿಗಟ್ಟ ರಸ್ತೆಯನ್ನು ಸರ್ವಋತು ರಸ್ತೆಯನ್ನಾಗಿ ಪರಿವರ್ತಿಸುವ ಕುರಿತು ಕೊಟ್ಟ ಮನವಿಯನ್ನೂ ಸಹ ನಾನು ಈ ಸಭೆಯ ಮುಂದೆ ಒಪ್ಪಿಸುತ್ತಿದ್ದೇನೆ.

ಹಾಗೆಯೇ ಉತ್ತರ ಕನ್ನಡ ಜಿಲ್ಲೆ ಅಂಕೋಲಾ ತಾಲ್ಲೂಕು ಪೂಜಗೇರಿ ಗ್ರಾಮಸ್ಥರು ಪೂಜಗೇರಿ ಹಳ್ಳಕ್ಕೆ ಗೋಡೆಯನ್ನು ಕಟ್ಟುವ ಕಾರ್ಯ ಕುರಿತು ಕೊಟ್ಟ ಮನವಿಯನ್ನೂ ಸಹ ನಾನು ಈ ಸಭೆಯ ಮುಂದೆ ಒಪ್ಪಿಸುತ್ತಿದ್ದೇನೆ.

MR. SPEAKER.—Petitions are presented.

LEGISLATIVE BUSINESS

THE KARNATAKA HIGHWAYS (AMENDMENT) BILL 1982

Motion to Consider

SRI KAGODU THIMMAPPA (Minister for Public Works)—Sir, I beg to move :

"That the Karnataka Highways (Ameudment) Bill 1982 be taken into consideration.

The Question Was Proposed

(MR. DEPUTY SPEAKER in the Chair)

ಶ್ರೀ ಕಾಗೋಡು ತಿಮ್ಮಪ್ಪ (ಲೋಕೋಪಯೋಗಿ ಮಂತ್ರಿಗಳು). —ಮಾನ್ಯ ಅಧ್ಯಕ್ಷರೇ, ಇದರಲ್ಲಿ ನಾವು ನಮ್ಮ ಕರ್ನಾಟಕ ರಾಜ್ಯ ಹೆದ್ದಾರಿ ಕಾನೂನಿಗೆ ಒಂದು ಸಣ್ಣ ತಿದ್ದುಪಡಿಯನ್ನು ತಂದಿದ್ದೇವೆ. ಈಗ ರಾಜ್ಯದ ಹೆದ್ದಾರಿಯಲ್ಲಿ ಬರತಕ್ಕಂಥ ಕೆಲವು ಸೀಮಿತ ಸೇತುವೆಗಳ ಮೇಲೆ ಹಾದು ಹೋಗತಕ್ಕಂಥ ವಾಹನಗಳ ಮೇಲೆ ತೆರಿಗೆಯನ್ನು ವಿಧಿಸತಕ್ಕಂಥ ತಿದ್ದುಪಡಿಯನ್ನು ತಂದಿದ್ದೇವೆ; ಅಂತಹ ಸೀಮಿತ ಸೇತುವೆಗಳ ಮೇಲೆ ಹೋಗತಕ್ಕಂಥ ವಾಹನಗಳ ಮೇಲೆ ಟೋಲ್ ಎನ್ನತಕ್ಕಂಥ ಸುಂಕವನ್ನು ವಿಧಿಸ